Ref.No. 243-2015

WW-3,

ದಿನಾಂಕಃ 12-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದಃ

ನಾನು ಐ ಟಿ ಐ ಓದಿರುತ್ತೇನೆ. ನಾನು 2 ನೇ ಪಾರ್ಟಿ ಸಂಸ್ಥೆಯನ್ನು ಜೂನ್ 2006 ರಲ್ಲಿ ಸೇರಿಕೊಂಡಿರುತ್ತೇನೆ. ನಾನು 2 ನೇ ಪಾರ್ಟಿ ಸಂಸ್ಥೆಯನ್ನು ಸೇರಿಕೊಳ್ಳುವ ಮೊದಲು ರಾಣೆ ಮೆಡ್ರಾಸ್ ರಲ್ಲಿ ಒಂದೂವರೆ ವರ್ಷ ಕೆಲಸ ಮಾಡಿರುತ್ತೇನೆ . 2 ನೇ ಪಾರ್ಟಿ ಸಂಸ್ಥೆ ಯವರು ಕೆಲಸ ಖಾಲಿ ಇದೆ ಎಂದು ಪಂಪ್ಲೆಟ್ಸ್ ಗಳನ್ನು ಅಂಟ್ಟಿಸಿದ್ದರು ಹಾಗಾಗಿ ನಾನು ಕೆಲಸಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಾನು 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಕೆಲಸ ಮಾಡುತ್ತಿರಬೇಕಾದರೆ 2013 ರಲ್ಲಿ ಯೂನಿಯನ್ ನ್ನು ರಚನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಪಾರ್ಟಿ ಸಂಸ್ಥೆ ಗೆ ಸಂಬಂಧಿಸಿದಂತೆ ಯಾವುದೇ ಯೂನಿಯನ್ ಇರಲಿಲ್ಲ ಎಂದರೆ ಸರಿ . 2013 ರಲ್ಲಿ 2 ನೇ ಪಾರ್ಟಿಯವರು ವಿರುದ್ಧ ನಾವು ಲೇಬರ್ ಆಫೀಸರ್ ಮುಂದೆ ಎತ್ತಿರುತ್ತೇವೆ ಎಂದರೆ ಸರಿ . ನಾನು ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಸುಮಾರು 500 ಜನ ಕೆಲಸಗಾರರರು ಇದ್ದರು . ಆ ಕಾಲಕ್ಕೆ ಆಡಳಿತ ವರ್ಗ ಮತ್ತು ಗುತ್ತಿಗೆ ಕೆಲಸಗಾರರರು ಸುಮಾರು 150 ಜನ ಇದ್ದರು. ನಾನು 2006 ರಿಂದ 2013 ರವರೆಗೆ ನನ್ನ ಮತ್ತು ಆಡಳಿತ ವರ್ಗ ದವರ ಸಂಬಂಧ ಚೆನ್ನಾಗಿತ್ತು. ಸದರಿ ಅವಧಿಯಲ್ಲಿ ಕೆಲಸಗಾರರರಿಗೆ ನೋಟೀಸ್ ನೀಡುವುದಾಗಲೀ , ವಿಚಾರಣೆ ಮಾಡುವುದಾಗಲಿ ಮತ್ತು ಕೆಲಸದಿಂದ ತೆಗೆದುಹಾಕುವುದಾಗಲಿ ಆಗಿರುವುದಿಲ್ಲ ಎಂದರೆ ಸರಿ . ಜನವರಿ 2013 ರಲ್ಲಿ ಪ್ರೊಡಕ್ಸನ್ ನಿಲ್ಲಿಸಿರುತ್ತಾರೆ ನಂತರ ಎರಡು ಮೂರುತಿಂಗಳ ನಂತರ ಫ್ಯಾಕ್ಟರಿ ಲಾಕ್ ಔಟ್ ಆಗಿರುತ್ತದೆ. ಬಹುಶಃ ಬ್ಯಾಂಕ್ ನವರು ಲಾಕ್ ಔಟ್ ಮಾಡಿರುತ್ತಾರೆ. ಸಂಬಳ ನೀಡಿರುವುದಿಲ್ಲ ಮತ್ತು ಕೆಲಸ ಕೊಡಬೇಕು ಎಂದು ನಾವು ಲೇಬರ್ ಆಫೀಸರ್ ಅವರ ಮುಂದೆ ವಿವಾದಗಳನ್ನು ಎತ್ತಿರುತ್ತೇವೆ. ಸಂಬಳ ನೀಡದೇ ಇರುವುದರ ಬಗ್ಗೆ payment of wages Act ಅಡಿಯಲ್ಲಿ ಆದೇಶವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿ . ಈ ಪ್ರಕರಣ ದಲ್ಲಿ ಜನವರಿ 2013 ರ ವೇತನವನ್ನು ನೀಡಬೇಕು ಎಂದು ಕೇಳಿಕೊಂಡಿರುತ್ತೇವೆ ಎಂದರೆ ಸರಿ .

ಈ ಪ್ರಕರಣದಲ್ಲಿ ಕೇಳಿದಂತಹ ನಾಲ್ಕು ತಿಂಗಳ ಸಂಬಳವು ವೇತನ ಪಾವತಿ ಕಾಯಿದೆ ಅಡಿಯಲ್ಲಿ ಈಗಾಗಲೇ ಆದೇಶವಾಗಿರುವುದರಿಂದ ಈ ವಿವಾದವು ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ಸರಿಯಾಗಿ ಸಂಬಳ ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ಪಾವತಿ ಕಾಯಿದೆ ಅಡಿಯಲ್ಲಿ ಆದೇಶವಾಗಿರುವುದರಿಂದ ಈ ವಿವಾದವು ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪಾರ್ಟಿ ಸಂಸ್ಥೆಯವರು ನಮ್ಮ ಬೇಡಿಕೆಗಳನ್ನು ಈಡೇರಿಸಿಲ್ಲವೆಂದು ಕಾರ್ಮಿಕ ಇಲಾಖೆಗೆ ವಿವಾದವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ . ಸದರಿ ವಿವಾದಕ್ಕೆ ನಾನು, ಬಿಳಿಗಿರಿ ಮತ್ತು ಸಿದ್ದಯ್ಯ ಎಂಬುವವರು ಸಹಿಯನ್ನು ಹಾಕಿರುತ್ತೇವೆ.

ನಾವು ಜನರಲ್ ಯೂನಿಯನ್ ನ ಮೂಲಕ ವಿವಾದವನ್ನು ಎತ್ತಿರುತ್ತೇವೆ ಎಂದರೆ ಸರಿ . ನಾವು ಸಂಘ ದ ಮೂಲಕ ನೀಡಿದಂತಹ ಬೇಡಿಕೆಗಳನ್ನು ಆಡಳಿತ ವರ್ಗದವರ ಮುಂದೆ ಇಟ್ಟಾಗ ಅವರು ನಮ್ಮ ಸಂಘವನ್ನು ಗುರುತಿಸಿರುವುದಿಲ್ಲ ಹಾಗೂ ಬೇಡಿಕೆಗಳನ್ನು ಈಡೇರಿಸದೆ ಇದ್ದುದರಿಂದ ನಾವು ಸ್ಟ್ರೈಕ್ ಮಾಡಿರುತ್ತೇವೆ ಎಂದರೆ ಸರಿ . ನಾವು ಸ್ಟ್ರೈಕ್ ಮಾಡಿದಾಗ ಆಡಳಿತ ವರ್ಗದವರು ನ್ಯಾಯಾಲಕ್ಕೆ ಹೋಗಿ ನಮ್ಮ ವಿರುದ್ಧ ತಡೆಯಾಜ್ಞೆಯನ್ನು ತಂದಿರುತ್ತಾರೆ ಎಂದರೆ ಸರಿ .

ನಾವು ಸ್ಟ್ರೈಕ್ ಮಾಡಿದ 14 ದಿನಗಳ ಮೊದಲು ಆಡಳಿತ ವರ್ಗ ಕ್ಕೆ ನೋಟೀಸ್ ನ್ನು ನೀಡಿರುವುದಿಲ್ಲ ಎಂದರೆ ನನಗೆ ಈಗ ನೆನಪಿಲ್ಲ . ನಾವು ಸ್ಟ್ರೈಕ್ ಮಾಡುವ ಕಾಲಕ್ಕೆ ನಮ್ಮ ಮತ್ತು 2 ನೇ ಪಾರ್ಟಿ ಯವರ ನಡುವೆ ವಿವಾದಗಳು ಲೇಬರ್ ಆಪೀಸರ್ ಮುಂದೆ ಬಾಕಿ ಇತ್ತು ಎಂದರೆ ಸರಿ . ನಾವು ಸ್ಟ್ರೈಕ್ ಮಾಡುವ ಮೊದಲು ನೋಟೀಸ್ ನ್ನು ನೀಡದೇ ಇದ್ದುದರಿಂದ ಹಾಗೂ ಸಂಧಾನ ಪ್ರಕ್ರಿಯೆಗಳು ಬಾಕಿ ಇದ್ದುದರಿಂದ ನಾವು ಮಾಡಿದ ಸ್ಟ್ರೈಕ್ ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ . ನಾವು ಸ್ಟ್ರೈಕ್ ಮಾಡಿದ್ದರಿಂದ ಕೆಲಸಕ್ಕೆ ಹೋಗಿರುವುದಿಲ್ಲ ಅದನ್ನೇ ಲಾಕ್ ಔಟ್ ಎಂದು ಹೇಳಿ 2 ನೇ ಪಾರ್ಟಿ ಸಂಸ್ಥೆಯವರ ವಿರುದ್ಧ ವಿವಾದವನ್ನು ಎತ್ತಿರುತ್ತೇವೆ ಎಂದರೆ ಸರಿಯಲ್ಲ . ನಾವು ಕಾನೂನು ಬಾಹಿರ ಮುಷ್ಕರ ಮಾಡಿದ್ದರಿಂದ 2 ನೇ ಪಾರ್ಟಿ ಸಂಸ್ಥೆ ಯವರು ಲಾಕ್ ಔಟ್ ಮಾಡಿದರೂ ಅದೂ ಕಾನೂನುಬದ್ಧವಾಗಿರುತ್ತದೆ ಎಂದರೆ ಸರಿಯಲ್ಲ . 2 ನೇ ಪಾರ್ಟಿ ಸಂಸ್ಥೆ ಯವರು ನಮಗೆ ಜನವರಿ 2013 ರ ಸಂಬಳವನ್ನು ನೀಡಿರುತ್ತಾರೆ.

ನಿ ಡಬ್ಲ್ಯೂ- 4 ರಲ್ಲಿ ತೋರಿಸಿರುವ ಹೆಸರುಗಳು ಸಮಂಜಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿ ಡಬ್ಲ್ಯೂ- 4 ಕ್ಕೆ ಕೆಲವು ಕೆಲಸಗಾರರರು ಸಹಿ ಹಾಕಿರುತ್ತಾರೆ ಇನ್ನೂ ಕೆಲವರು ಹಾಕಿರುವುದಿಲ್ಲ ಎಂದರೆ ಸರಿ. ನಿ ಡಬ್ಲ್ಯೂ- 4 ರಲ್ಲಿ Consultant, Management Staff & Workers ಹೆಸರುಗಳು ಸೇರಿರುತ್ತವೆ. Consultant & Management Staff ಗಳು ಯೂನಿಯನ್ ನ ಸದಸ್ಯರಾಗಿರುವುದಿಲ್ಲ ಎಂಬ ಸೂಚನೆಗೆ ಸಾಕ್ಷಿದಾರರು ಆ ಕಾಲಕ್ಕೆ ಯೂನಿಯನ್ ಇರಲಿಲ್ಲ ಎಂದು ನುಡಿಯುತ್ತಾರೆ . ಯೂನಿಯನ್ ರಚನೆ ಯನ್ನೇ ಮಾಡಿರುವುದಿಲ್ಲ ಎಂದರೆ ಸರಿ . ನಿ ಡಬ್ಲ್ಯೂ-5 ನ್ನು ಸಿ ಐ ಟಿ ಯು ಯೂನಿಯನ್ ನ ಲೆಟರ್ ಹೆಡ್ ಮೂಲಕ ತಹಶೀಲ್ದಾರ್ ರವರಿಗೆ ನೀಡಿರುತ್ತೇವೆ ಎಂದರೆ ಸರಿ . ಅದೇ ರೀತಿ ನಿ ಡಬ್ಲ್ಯೂ-7 ನ್ನು ಲೇಬರ್ ಡಿಪಾರ್ಟ್ ಮೆಂಟ್ ಗೆ ನೀಡಲಾಗಿರುತ್ತದೆ ಎಂದರೆ ಸರಿ . ಅದೇ ರೀತಿ ನಿ ಡಬ್ಲ್ಯೂ-8 ನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿರುತ್ತದೆ ಎಂದರೆ ಸರಿ .ಅದೇ ರೀತಿ ನಿ ಡಬ್ಲ್ಯೂ-12 ನ್ನು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ನೀಡಲಾಗಿರುತ್ತದೆ ಎಂದರೆ ಸರಿ. ಯೂನಿಯನ್ ನು ರಚಿಸಿ ಸ್ಟ್ರೈಕ್ ಮಾಡಿರುವುದು ತಪ್ಪು ಎಂದು ತಿಳಿದು ಈಗ ಯೂನಿಯನ್ ರಚನೆ ಮಾಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . 2 ನೇಪಾರ್ಟಿ ಸಂಸ್ಥೆಯವರು ಎಂದೂ ಕೂಡ ಲಾಕ್ ಔಟ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ಲಾಕ್ ಔಟ್ ಸಂಸ್ಥೆಯವರು ಮಾಡಿದ್ದಾರೋ ಹೊರಗಡೆಯವರು ಮಾಡಿದ್ದಾರೋ ಗೊತ್ತಿಲ್ಲ ಆದರೆ ನಮ್ಮನ್ನು ಹೊರಗಡೆ ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ .

ನಮ್ಮಲ್ಲಿ ಕೆಲಸದಿಂದ ತೆಗೆದು ಹಾಕಿರುತ್ತಾರೆ ಎಂದು ನಾವು ಲೇಬರ್ ಡಿಪಾರ್ಟ್ ಮೆಂಟ್ ಮುಂದೆ ವಿವಾದವನ್ನು ಎತ್ತಿರುವುದಿಲ್ಲ ಎಂದರೆ ಸರಿ . ನಮ್ಮ ಸಂಸ್ಥೆಯಲ್ಲಿ ಎಷ್ಟು ಜನ Land sellers ಇದ್ದಾರೆ ಎಂದು ನನಗೆ ಗೊತ್ತಿಲ್ಲ. 2 ನೇ ಪಾರ್ಟಿ ಸಂಸ್ಥೆ ಯವರು ನಮ್ಮನ್ನು ಇ ಎಸ್ ಐ ಮತ್ತು ಪಿ ಎಫ್ ಅಡಿಯಲ್ಲಿ ಕವರ್ ಮಾಡಿದ್ದರು ಎಂದರೆ ಸರಿ . ಸಾಕ್ಷಿಯು ಮುಂದುವರೆದು ನಂತರ ನಿಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ . 2006 ರಿಂದ 2011 ರವರೆಗೆ ಇ ಎಸ್ ಐ ಮತ್ತು ಪಿ ಎಫ್ ಅನ್ನು ಕಟ್ಟಿರುತ್ತಾರೆ ನಂತರ ಕಟ್ಟಿರುವುದಿಲ್ಲ.

2 ನೇ ಪಾರ್ಟಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.